ಓ ಎಸ್ ನಂಃ 1002-14
ಪಿ ಡಬ್ಲ್ಯೂ ಃ 1

ದಿಃ 13-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ವಿ ಕೆ ವಕೀಲರಿಂದ

38. ನಾನು ಮಹೇಶ್ ಗೌಡರವರಿಗೆ ಮಾರಾಟ ಮಾಡಿರುವ ಕ್ರಯ ಪತ್ರದಲ್ಲಿ ದಕ್ಷಿಣಕ್ಕೆ 9 ಮತ್ತು 11 ನೇ ಪ್ರತಿವಾದಿಗಳು ಇರುವುದಾಗಿ ಹೇಳಿರುತ್ತೇನೆ ಎಂದರೆ ಸಾಕ್ಷಿಯು ಮಹೇಶ್ ಗೌಡರವರು 33 ಗುಂಟೆ ಮಾರಿರುವುದು ನಿಜ ಆದರೆ ಪ್ರತಿವಾದಿಗಳು 1 3/4 ಗುಂಟೆ ಬರೆಸಿಕೊಂಡಿರುತ್ತಾರೆ. (ಸಾಕ್ಷಿಯು ಸದರಿ ಪ್ರಶ್ನೆಗೆ ನೇರವಾಗಿ ಉತ್ತರಿಸದೇ ಸದರಿ ದಾವೆಯ ಎಲ್ಲಾ ಸಂಗತಿಗಳನ್ನು ವಿವರಿಸಿರುತ್ತಾರೆ).

39. ಸದರಿ ದಾವೆಯನ್ನು ಸರ್ವೆ ನಂ 13/1 ಕ್ಕೆ ಸಂಬಂದಪಟ್ಟಂತೆ ನಾನು ಹೂಡಿರುತ್ತೇನೆ. ಸರ್ವೆ ನಂ 27/2 ಹೊಸ ಸರ್ವೆ ನಂಬರ್ ಆಗಿ ಸರ್ವೆ ನಂ 16/1, 16/2, 16/3, 16/18 ಆಗಿರುತ್ತದೆ ಎಂದು ನಾನು ವಾದಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳಲ್ಲಿ ಸರ್ವೆ ನಂ 27 ಹೊಸ ಸರ್ವೆ ನಂ 16/1, 16/2, 16/3, 16/18 ಎಂದು ಪರಿವರ್ತನೆ ಆಗಿರುತ್ತದೆ ಎನ್ನುವ ಅಂಶ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

40. ದಿನಾಂಕಃ 08-08-1996 ರಲ್ಲಿ ನಾನು ಮತ್ತು ನಮ್ಮ ಕುಟುಂಬದವರು ಪಂಚಾಯ್ತಿ ಪಾರೀಖತ್ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ಸಾಕ್ಷಿಗೆ ಪಂಚಾಯ್ತಿ ಪಾರೀಖತ್ ದಿನಾಂಕಃ 08-08-1996 ರಲ್ಲಿ ನಮ್ಮ ಕುಟುಂಬದ ಸದಸ್ಯರ ನಡುವೆ ಆಗಿರುತ್ತದೆ ಎಂದರೆ ಸುಳ್ಳು. ನಾನು ಮಹೇಶ್ ಗೌಡರವರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಪಂಚಾಯ್ತಿ ಪಾರೀಖತ್ ಬಗ್ಗೆ ಹೇಳಿರುತ್ತೇನೆ ಮತ್ತು ಸದರಿ ಪಾರೀಖತ್ತಿನ ಪ್ರಕಾರ ನಾವು ಎಂ ಆರ್ ಮಾಡಿಸಿ ಖಾತೆ ಬದಲಾವಣೆ ಮಾಡಿಸಿರುತ್ತೇವೆ ಎಂದರೆ ಸುಳ್ಳು. ನಿಪಿ 14 ರಂತೆ ಸರ್ವೆ ನಂ 16 ರ ಮೂಲ ಸರ್ವೆ ನಂ 29 ಆಗಿರುತ್ತದೆ ಎಂದರೆ ಸುಳ್ಳು. ಸರ್ವೆ ನಂ 16 ರ ಮೂಲ ಸರ್ವೆ ನಂ 27/2 ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಯಾವುದೇ ದಾಖಲಾತಿಗಳಲ್ಲಿ ಸರ್ವೆ ನಂ 16 ರ ಮೂಲ ಸರ್ವೆ ನಂ 27 ಎಂದು ಎಲ್ಲೂ ನಮೂದಾಗಿರುವುದಿಲ್ಲ ಎಂದರೆ ಸುಳ್ಳು. ನಿಪಿ 14 ರಲ್ಲಿ ಸರ್ವೆ ನಂ 16 ರ ಮೂಲ ಸರ್ವೆ ನಂ 29 ಎಂದು ಇರುವ ವಿಷಯ ನಾನು ತಿಳಿದುಕೊಂಡು ನಿಪಿ 14 ನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ಸಾಕ್ಷಿ ನನಗೆ ಸದರಿ ದಾಖಲಾತಿಯ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 14 ಮತ್ತು 15 ರ ಪ್ರಕಾರ ಹಳೆ ಸರ್ವೆ ನಂ 29 ಹೊಸ ಸರ್ವೆ ನಂಬರ್ 16 ಪೋಡಿಯಾದ ನಂತರ 21 ಜನರ ಹೆಸರು ಸ್ವಾಧೀನದಾರರು

ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಜಮೀನಿನಲ್ಲಿ 21 ಜನ ಸ್ವಾಧೀನದಲ್ಲಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ನೀಡಿದ ನಿಪಿ 19 ಖರ್ದಾ ದಾಖಲಾತಿಯಲ್ಲಿ ವೆಂಕಟರಮಣ ಮತ್ತು ಹನುಮ ಬಿನ್ ಗುಜ್ಜಾರಿರವರ ಹೆಸರು ಹಳೆ ಸರ್ವೆ ನಂ 29 ಮತ್ತು ಹೊಸ ಸರ್ವೆ ನಂ 16 ರಲ್ಲಿ ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ದಿನಾಂಕಃ 05-07-2008 ರಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ತಮ್ಮ ಮತ್ತು ಕುಟುಂಬಸ್ಥರು ಸೇರಿ ಗಂಗಾಧರಸ್ವಾಮಿರವರಿಗೆ ಸರ್ವೆ ನಂ 16/18 ರಲ್ಲಿ 10 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸರ್ವೆ ನಂ 16/18 ರಲ್ಲಿ ಮಾರಾಟ ಮಾಡಿರುವ 10 ಗುಂಟೆ ಜಮೀನನ್ನು ನಾನು ಸದರಿ ದಾವೆಯಲ್ಲಿ ಸೇರಿಸಿರುತ್ತೀರಾ ಎಂದರೆ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

41. ಸರ್ವೆ ನಂ 16/18 ರ ಕ್ರಯ ಪತ್ರದ ಚಕ್ಕುಬಂದಿಯಲ್ಲಿ ನನಗೆ ಸೇರಿದ ಇನ್ನು ಜಮೀನು ಇರುತ್ತದೆ ಎಂದು ಎಲ್ಲೂ ನಮೂದು ಮಾಡಿರುವುದಿಲ್ಲ ಎಂದರೆ ಸುಳ್ಳು. ನಿಪಿ 14 ರಲ್ಲಿ ಸರ್ವೆ ನಂ 16/1, 16/2, 16/3 ರಲ್ಲಿ ಮುತ್ತಮ್ಮ ಮತ್ತು ರಂಗಮ್ಮ, ಗಂಗಯ್ಯ ಬಿನ್ ಚಿಕ್ಕಗುಜ್ಜಾರಿ ಎಂದು ಕ್ರಮವಾಗಿ ನಮೂದಾಗಿರುತ್ತದೆ ಎಂದರೆ ಸುಳ್ಳು. ನಿಪಿ 15 ರಲ್ಲಿ ಸರ್ವೆ ನಂ 16/18 ರಲ್ಲಿ ಮುತ್ತಮ್ಮ ಮತ್ತು ರಂಗಮ್ಮರವರ ಹೆಸರು ಇರುತ್ತದೆ ಎಂದರೆ ಸಾಕ್ಷಿಯು ಗುಜ್ಜಾರಯ್ಯರವರಿಗೆ 2 ಮದುವೆಯಾಗಿದ್ದು ಮೊದಲನೇ ಹೆಂಡತಿ ಮುತ್ತಮ್ಮ ಮತ್ತು 2 ನೇ ಹೆಂಡತಿ ರಂಗಮ್ಮರವರು ಆಗಿರುತ್ತಾರೆ. ಗುಜ್ಜಾರಯ್ಯನ 2 ನೇ ಹೆಂಡತಿ ರಂಗಮ್ಮರವರಿಗೆ ಇಬ್ಬರು ಮಕ್ಕಳು ಇದ್ದು ಅವರ ಹೆಸರು ಹನುಮಕ್ಕ ಮತ್ತು ರಂಗಮ್ಮ ಆಗಿರುತ್ತದೆ ಎಂದರೆ ಸರಿ. ಹನುಮಕ್ಕನ ಯಜಮಾನರ ಹೆಸರು ಚಿಕ್ಕವೀರಯ್ಯ ಎಂದರೆ ಸರಿ. ಹನುಮಕ್ಕರವರ ಮಕ್ಕಳನ್ನು ಪ್ರತಿವಾದಿ 7 ರಿಂದ 11 ಎಂದು ಪ್ರಸ್ತುತ ದಾವೆಯಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರಿಗೆ ಪ್ರಸ್ತುತ ಆಸ್ತಿಯಲ್ಲಿ ಸಂಬಂದ ಇರುವುದಿಲ್ಲ ಎಂದು ನುಡಿಯುತ್ತಾರೆ. ಮುತ್ತಮ್ಮ ಮತ್ತು ರಂಗಮ್ಮರವರ ಗಂಡ ಗುಜ್ಜಾರಯ್ಯ ಆಗಿದ್ದು ಅವರು ಕರೇಹನುಮಯ್ಯರವರ ಅಣ್ಣ ಮತ್ತು ಚಿಕ್ಕಗುಜ್ಜಾರಯ್ಯರವರ 3 ನೇ ಮಗ ಆಗಿರುತ್ತಾರೆ ಎಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**